ಗಣಿತದ ಮೇಷ್ಟ್ರಾದ ಈಶ್ವರ್ ತಾನು ಬರೆದಿರುವ ಹಾಡನ್ನು ನೀವು ಹಾಡಬೇಕು ಎಂದೊಮ್ಮೆ, ಬಂದರೆ ತಾನು ಬರೆದಿರುವ ನಾಟಕಕ್ಕೆ ನೀವೇ ಸಂಗೀತ ಮಾಡಬೇಕೆಂದು ದುಂಬಾಲು ಬೀಳುತ್ತಿದ್ದ. ಗಣಿತ ಮಾತ್ರವಲ್ಲದೆ, ನಾಟಕ–ಕವಿತೆ ಎಂದು ತನ್ನ ಲೆಕ್ಕಾಚಾರದ ಗಡಿಯನ್ನು ವಿಸ್ತರಿಸಿಕೊಂಡಿದ್ದ ಆತ ರಾಜಕೀಯ ಪಕ್ಷಗಳಿಗೆ ಬೇಕಾದವನಾಗಿದ್ದ. ಇಂತಹ ಪ್ರಭಾವಿ ಈಶ್ವರ್‌ಗೆ ಒಮ್ಮೆ ಉತ್ತಮ ಶಿಕ್ಷಕ ಎಂಬ ಬಿರುದು ಸಿಕ್ಕ ಕಾರಣ ಅವನ ಶಿಷ್ಯವೃಂದ ಇವನನ್ನು ಸನ್ಮಾನಿಸಲು ಶಾಲೆಯಲ್ಲೊಂದು ಕಾರ್ಯಕ್ರಮ ಏರ್ಪಡಿಸಿದ್ದರು. ಅಲ್ಲಿ ನೀವೇ ಹಾಡಬೇಕು ಎಂದು ಅವನ ಶಿಷ್ಯವೃಂದದ ಮೂಲಕ ಶೋಭಾಳನ್ನು ಆತ ಒಪ್ಪಿಸಿದ್ದ.

ಆ ಕಾರ್ಯಕ್ರಮದಲ್ಲೂ ಎಂದಿನಂತೆ ಸೊಗಸಾಗಿ ಹಾಡಿದ್ದ ಇವಳನ್ನು ಅಲ್ಲಿದ್ದ ಎಲ್ಲರೂ ಹೊಗಳುವವರೇ. ಅವರಲ್ಲೊಬ್ಬ ಸುರಸುಂದರಾಂಗ ಪೋಸ್ಟ್ ಮಾಸ್ಟರ್ ಇದ್ದ. 'ನೆಲ್ಲೂರಿನ ಬ್ರಾಹ್ಮಣ ಕುಟುಂಬದವ ನಾನು, ಸೆಂಟ್ರಲ್ ಗವರ್ನ್‌ಮೆಂಟ್ ಉದ್ಯೋಗಿ, ನನಗೆ ಕರ್ನಾಟಕ ಸಂಗೀತ ಎಂದರೆ ಉಸಿರು, ನಿಮ್ಮಂತಹ ಅದ್ಭುತ ಹಾಡುಗಾರ್ತಿಯನ್ನೇ ಮದುವೆಯಾಗಬೇಕೆಂದಿದ್ದೇನೆ, ತಮಗೆ ಆಸಕ್ತಿಯಿದ್ದಲ್ಲಿ ಮದುವೆಯಾಗೋಣವೇ?' ಎಂದಿದ್ದ. 'ತಾನು ಬ್ರಾಹ್ಮಣ ಮನೆತನದವಳಲ್ಲ, ಕ್ಷಮಿಸಿ' ಎಂದು ಹೇಳಿ ತಕ್ಷಣಕ್ಕೆ ತಪ್ಪಿಸಿಕೊಂಡಿದ್ದರೂ ಆತ ಮನೆಯವರೆಗೂ ಬಂದಿದ್ದ. ಅವಳ ಹೆತ್ತವರನ್ನು ಮಾತಾಡಿಸಿ 'ತನಗೆ ಜಾತಿಗೀತಿ ಮುಖ್ಯ ಅಲ್ಲ, ನಿಮ್ಮ ಮಗಳಂತಹ ಅದ್ಭುತ ಹಾಡುಗಾರ್ತಿಯನ್ನು ಹೆಂಡತಿಯಾಗಿ ಹೊಂದಬೇಕೆಂಬುದು ಆಸೆ...' ಹೀಗೆ ಏನೇನೊ ಹೇಳಿದ್ದ. ಆದರೆ ಶೋಭಾ ಸುತರಾಂ ಒಪ್ಪಲಿಲ್ಲ. ಆತ ಮರು ವರ್ಷವೇ ಟ್ರಾನ್ಸ್‌ಫರ್ ಆಗಿ ಹೋಗಿದ್ದರಿಂದ ಶೋಭಾ ನಿಟ್ಟುಸಿರಿಟ್ಟಿದ್ದರೂ ನಿಧಾನಕ್ಕೆ ಅವಳೊಳಗೆ ಅವನ ಮೇಲೆ ಆಸಕ್ತಿ ಬಂದಂತಿತ್ತು. ಆದರದನ್ನು ಹತೋಟಿಯಲ್ಲಿಟ್ಟುಕೊಂಡು ಮನಸ್ಸನ್ನು ದೃಢಗೊಳಿಸಿಕೊಂಡಿದ್ದಳು.

'ನಿಮ್ಮನ್ನು ನಾನು ತುಂಬಾ ಪ್ರೀತಿಸುತ್ತಿದ್ದೇನೆ, ನಿಮ್ಮ ಸಂಗೀತ ಎಂದರೆ ಪಂಚಪ್ರಾಣ' ಎಂದು ಫೇಸ್‌ಬುಕ್ ಮೆಸೆಂಜರ್‌ನಲ್ಲಿ ಮೆಸೇಜ್‌ಗಳನ್ನು ಕಳುಹಿಸುತ್ತಲೇ ಇದ್ದ ಆತನನ್ನು ಒಂದು ದಿನ ಬ್ಲಾಕ್ ಮಾಡಿದಳು. ಆದರೂ ಮನಸ್ಸಿನಾಳದಲ್ಲಿ ಆಗಾಗ ಏಳುವ ಅವನ ನೆನಪಿನಿಂದಲೂ ಮತ್ತು ಮದುವೆಯೆಂಬ ಒತ್ತಡದಿಂದ ಬಿಡಿಸಿಕೊಳ್ಳಲು ಶೋಭಾ ದೇಶವನ್ನೇ ತೊರೆದು ಮಾಲ್ಡೀವ್ಸ್‌ಗೆ ಬಂದಳು. ಅಷ್ಟು ಮಾತ್ರವಲ್ಲದೆ, ಆತನ ಮೇಲಿನ ಕೋಪದಿಂದ ತನ್ನ ಜೀವವೇ ಆಗಿದ್ದ ಕರ್ನಾಟಕ ಸಂಗೀತವನ್ನು ಸಂಪೂರ್ಣವಾಗಿ ತೊರೆದಿದ್ದಳು. ಹಾಗೆ ತೊರೆದಿದ್ದ ಸಂಗೀತದ ಸೆಳೆತ ಮಾತ್ರವಲ್ಲದೆ ಆತನ ಸೆಳೆತಕ್ಕೂ ಮತ್ತೆ ಒಳಗಾಗುತ್ತಾಳೆ ಎಂಬುದು ಅವಳಿಗೇ ಗೊತ್ತಿರಲಿಲ್ಲ. ಅದೂ ಮಾಲ್ಡೀವ್ಸ್‌ನ ಈ ಸಣ್ಣ ದ್ವೀಪವೊಂದರಲ್ಲಿ!

ಅದು ಸಂಭವಿಸಲು ಕಾರಣವಾಗಿದ್ದು ಅದೇ ದ್ವೀಪದ ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಲಸ ಮಾಡುತ್ತಿದ್ದ ಇಂಗ್ಲೆಂಡಿನ ಎಮಿಲಿ ಜೆಸ್ಸಿ ಟೈಲರ್‌ಳಿಂದ. ಮಂಗಳೂರು ಮೂಲದ ಶೋಭಾಳ ಸಹೋದ್ಯೋಗಿ ಮರಿಯಾ ಲಾರೆನ್ಸ್‌ಳ ಬರ್ತ್ ಡೇ ಪಾರ್ಟಿಯಲ್ಲೇ ಶೋಭಾ ಆಕೆಯನ್ನು ಭೇಟಿಯಾಗಿದ್ದುದು. ಯಾರೊಂದಿಗೆಯೂ ಅಷ್ಟಾಗಿ ಬೆರೆಯದ ಶೋಭಾಳನ್ನು ನೋಡಿ ಆಶ್ಚರ್ಯಗೊಂಡು ಡಿನ್ನರ್ ಸಮಯದಲ್ಲಿ ಅವಳ ಬಳಿ ಬಂದು ಕೂತು ಮಾತನಾಡಲು ಶುರು ಮಾಡಿದ್ದಳು. ಇಬ್ಬರು ಮೆಲ್ಲಗೆ ನಗುತ್ತಾ ಹರಡಿಕೊಂಡಿದ್ದರು.

'ಐ ಗೆಸ್ ಯೂ ಆರ್ ಅ ಫೆಮಿನಿಸ್ಟ್... ರೈಟ್?'

ಶೋಭಾ ನಕ್ಕು, 'ನನಗೆ ಫೆಮಿನಿಸಂ ಇಷ್ಟ... ಆದರೆ ನಾನು ಸ್ತ್ರೀವಾದಿಯಲ್ಲ' ಎಂದು ನಕ್ಕಿದ್ದಳು.

'... ಜೆಂಡರ್ ಟ್ರಬಲ್ ಪುಸ್ತಕ ಓದಿದಿರಾ ನೀವು? ಜುಡಿತ್ ಬಟ್ಲರ್‌ಳ ಪುಸ್ತಕ?'

'ಇಲ್ಲ ಓದಿಲ್ಲ... ಓದುತ್ತೇನೆ' ಎಂದಳು.

ಎಮಿಲಿ ಇವಳ ನೋಡಿ 'ಯಾಕೆ ನೀವಿನ್ನೂ ಮದುವೆಯಾಗಿಲ್ಲ? ಗಂಡಸರನ್ನು ಕಂಡರೆ ದ್ವೇಷವಾ? ಕ್ಷಮಿಸಿ, ನಿಮ್ಮ ಖಾಸಗಿ ವಿಷಯಗಳನ್ನು ಕೇಳಿದ್ದು ನಿಮಗೆ ತೊಂದರೆಯಾಗಿದ್ದರೆ...'

ಶೋಭಾ ಮುಗುಳ್ನಕ್ಕು 'ನೋ ನೋ... ಇಟ್ಸ್ ಓಕೆ... ಮದುವೆಯಲ್ಲಿ ನನಗೆ ಆಸಕ್ತಿಯಿಲ್ಲ... ಗಂಡ ಎನ್ನುವ ಪ್ರಾಣಿಗಾಗಿ ಬದುಕನ್ನೇ ತೇಯುವುದು... ನನಗಿಷ್ಟವಿಲ್ಲ... ಕುಟುಂಬ ಎನ್ನುವ ಸಂಸ್ಥೆ ಹುಟ್ಟಿಕೊಂಡಿದ್ದೇ ಗಂಡಸರ ಅಧಿಪತ್ಯ ನಡೆಸಲು...' ಎಂದು ನಕ್ಕಾಗ, ಎಮಿಲಿ 'ಅದಕ್ಕೇ ನೀವು ಫೆಮಿನಿಸ್ಟಾ ಅಂತ ನಾನ್ ಕೇಳಿದ್ದು...' ಎಂದು ಜೋರಾಗಿ ನಕ್ಕು ನೂಡಲ್ಸ್ ತಿನ್ನುತ್ತಾ ಶೋಭಾಳತ್ತ ತಿರುಗಿ ಗಂಭೀರವಾಗಿ ಮಾತನ್ನು ಮುಂದುವರಿಸಿದಳು.

'ನೋಡಿ ಶೋಭಾ... ನಾನೂ ನಿಮ್ಮ ಹಾಗೇ ಫೆಮಿನಿಸ್ಟ್ ಆಗಿದ್ದೆ... ಆದರೆ ಕಮಿಟೆಡ್ ಫೆಮಿನಿಸ್ಟ್ ಅಲ್ಲ... ಬಹುಶಃ ಫೆಮಿನಿಸಂ ನನಗೆ ಜಸ್ಟ್ ಫ್ಯಾಷನ್ ಆಗಿತ್ತೇನೊ... ನನಗೂ ಈ ಗಂಡಸರನ್ನು ಕಂಡರೆ ಆಗುತ್ತಿರಲಿಲ್ಲ. ಹೆಣ್ಣಿನ ಮೈಯಿರುವುದೇ ತಮಗಾಗಿ ಎಂಬಂತೆ ಗಂಡಸರು ನಡೆದುಕೊಳ್ಳುವುದು ನನಗಿಷ್ಟವಿಲ್ಲ. ಸೋ ಅವರಿಂದ ದೂರವಾಗಿ ನಿಮ್ಮಂತೆಯೇ ಒಂಟಿಯಾಗಿ ಬದುಕತೊಡಗಿದೆ. ಇಲ್ಲಿಗೆ ಬರುವವರೆಗೂ... ಆದರೆ ಇಲ್ಲಿಗೆ ಬಂದ ಮೇಲೆ ಬದುಕು ಬೇರೆ ತೆರನಾಗಿ ಕಾಣಿಸುತ್ತಿದೆ. ನನಗೀಗ ವಯಸ್ಸು ನಲವತ್ತೆಂಟು. ಹೀಗೆ ಒಂಟಿಯಾಗಿ ಇದ್ದು ಬಿಟ್ಟರೆ ನಮ್ಮ ಕೊನೆಯ ದಿನಗಳು ಹೇಗೆ? ನಮಗೆ ಅಂತ ಯಾರೂ ಇಲ್ಲ... ತಂದೆ ತಾಯಿ ಎಷ್ಟು ದಿನ ನಮ್ ಜೊತೆ ಇರ್ತಾರೆ ಹೇಳಿ!? ನಮ್ಮ ಒಡ ಹುಟ್ಟಿದವರು ಮದುವೆಯಾಗಿ ಆರಾಮಾಗಿ ಸೇಫ್ ಆಗಿ ಸಾಯ್ತಾರೆ... ನಮ್ಮನ್ನವರು ತಿರುಗಿಯೂ ನೋಡುವುದಿಲ್ಲ... ನಮ್ಮ ಕೊನೆ ದಿನಗಳ ನೆನೆಸಿಕೊಂಡರೆ ಭಯ ಆಗುತ್ತೆ... ಹಾಗಂತ ನಾವು ಮದುವೆಯಾಗಲಿಕ್ಕೂ ಆಗಲ್ಲ... ನಮಗೆ ಯಾವ ರೀತಿಯ ಗಂಡಸು ಇಷ್ಟವಾಗುತ್ತಾನೆ ಎನ್ನುವುದೇ ನಮಗೆ ಗೊತ್ತಿಲ್ಲ, ಯಾಕೆಂದರೆ ಇಷ್ಟು ವರ್ಷ ನಾವು ಅವರನ್ನು ದ್ವೇಷಿಸುತ್ತಲೇ ಬಂದಿದ್ದೇವೆ... ನಿಮಗಿರಬಹುದೇನೊ, ಆದರೆ ನನಗೆ ಇಲ್ಲ... ಹಹಹಹ... ಹೆಣ್ಣು ಎಂದರೆ

